ಮಾಡುವುದು ಅಭ್ಯಾಸವಾಗಿತ್ತು. ಒಮ್ಮೆ ಮನಸೂರಿನಲ್ಲಿ 'ಸಂಗ್ಯಾಬಾಳ್ಯಾ' ನೋಡಿದ್ದೂ ನೆನಪಿದೆ. ಚನಮಲ್ಲಜ್ಜ ಒಳ್ಳೆಯ ಹಾಸ್ಯ ನಟನಾಗಿದ್ದ. ಮನೆಯಲ್ಲಿ ಯಾವಾಗಲೂ ಇಂಥ ವಾತಾವರಣವನ್ನು ಕಂಡಿದ್ದೇನೆ.

ನಂತರ ಶಾಲಾದಿನಗಳಲ್ಲಿ, ಕಾಲೇಜಿನಲ್ಲಿ ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಕನ್ನಡ, ಹಿಂದೀ ನಾಟಕಗಳಲ್ಲಿ ಅಭಿನಯಿಸಿದ್ದೇನೆ. ಬಿ.ವಿ. ಕಾರಂತರ ಅಪೇಕ್ಷೆಯ ಮೇರೆಗೆ ರಾಕೇಶ್‌ರ 'ಆಷಾಢದ ಒಂದು ದಿನ' ಮಾಡಿದ ನಂತರ ನಾಟಕದ ನಂಟು ಅಂಟಾಗಿ ತೊಡಕಿತು. ಹಿಂದಿಯಲ್ಲಿ ಕಾದಂಬರಿಗಿಂತ ಹೆಚ್ಚು ನಾಟಕ ಓದಿದ್ದೇನೆ. ಹೀಗೆ ಮೊದಲಿನಿಂದಲೂ ನಾಟಕದ ಹುಚ್ಚು. ಮಕ್ಕಳಿಗೆ ಕಲಿಸುವಾಗಲೂ ನಾಟಕ, ವ್ಯಾಕರಣ, ಕಾವ್ಯಕ್ಕೆ ಆದ್ಯತೆ ನೀಡುತ್ತಿದ್ದೆ. ನನ್ನ ಅಧ್ಯಾಪನ ವೃತ್ತಿಯ ಹೆಚ್ಚಿನ ಯಶಸ್ಸಿಗೆ ನನ್ನ ನಾಟ್ಯಪ್ರೀತಿಯೇ ನೆರವಾಗಿದೆ.

ಕಾರಂತರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಾಟಕ ಕಮ್ಮಟ ಮಾಡಿದ ನಂತರ ನಾನು, ಚಂಪಾ, ಶಾಂತಿನಾಥ ದೇಸಾಯಿ, ಸಂಪಿಗೆ ತೋಂಟದಾರ್ಯ, ಮಾಲತಿ, ಮುರಿಗೆಪ್ಪ, ಹೇಮಾ, ಭಾರತೀಶ ಹಿರೇಮಠ, ಹರ್ಷ ಡಂಬಳ ಮುಂತಾದವರು ಸೇರಿಕೊಂಡು 'ಅಂತರಂಗ' ಹೆಸರಿನ ಸಂಸ್ಥೆಯನ್ನೇ ಹುಟ್ಟು ಹಾಕಿದೆವು. ಅದರ ಮೂಲಕ ಹಲವಾರು ಹೊಸ ಅಲೆಯ ನಾಟಕಗಳನ್ನು ರಂಗಕ್ಕೆ ತಂದೆವು. ಬೇರೆ ಬೇರೆ ಊರುಗಳಿಗೂ ಹೋಗಿ ವಿವಿಧ ನಾಟಕಗಳನ್ನು ಪ್ರದರ್ಶಿಸಿದೆವು.

ನನ್ನ ಇಂಥ ನಾಟಕಾಸಕ್ತಿಯನ್ನು ತಿಳಿದಿದ್ದ ಶ್ರೀರಂಗರು ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ನನ್ನನ್ನು ಅಕಾಡೆಮಿಯ ಸದಸ್ಯನನ್ನಾಗಿ ಆರಿಸಿಕೊಂಡಿದ್ದರು. ಮೊದಲಿನಿಂದ ನಾನು ಬಹಳ ಹಚ್ಚಿಕೊಂಡಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾತ್ರ ಒಂದು ಸಲವೂ ನನ್ನನ್ನು ಯಾವುದಕ್ಕೂ ಪರಿಗಣಿಸಲಿಲ್ಲ. ಕೊನೆಕೊನೆಗೆ ತನಗೇ ತುದುಕಳಿಸಿ ಬಂದಾಗ ಒಮ್ಮೆ, ಬಹುಶಃ ಮನಸ್ಸಿಲ್ಲದೆಯೇ, ನನಗೆ ಪ್ರಶಸ್ತಿ ನೀಡಿ ಕೈ ತೊಳೆದುಕೊಂಡಿತು. ಆದರೆ ನಾನು ಸಾಹಿತ್ಯಕ್ಕಿಂತ ಕಡಿಮೆ ಕೆಲಸ ಮಾಡಿದ ಕ್ಷೇತ್ರವಾಗಿದ್ದ ನಾಟಕ ಅಕಾಡೆಮಿ ಮಾತ್ರ ಎರಡು ಸಲ ನನ್ನನ್ನು, ಕನಿಷ್ಠ ಪಕ್ಷ, ಸದಸ್ಯನನ್ನಾಗಿಸಿಯಾದರೂ, ಗೌರವಿಸಿತು; ಅದಕ್ಕಾಗಿ ನನ್ನಿಂದ ಸಾಧ್ಯವಿದ್ದ ಅನೇಕ ಕೆಲಸ ಮಾಡಿ ಕೊಟ್ಟೆ, 30ಕ್ಕಿಂತ ಹೆಚ್ಚು ಪುಸ್ತಕ ಸಂಪಾದಿಸಿದೆ, ಐದು ಪ್ರಮುಖ ಕನ್ನಡ ನಾಟಕಗಳನ್ನು ಹಿಂದಿಗೆ ಭಾಷಾಂತರಿಸಿ ಕೊಟ್ಟೆ. ಅನೇಕ ಕಲಾವಿದರಿಗೆ ಮಾಶಾಸನ ದೊರಕಿಸಿ ಕೊಟ್ಟೆ. ಈ ಎಲ್ಲ ಗೊಂದಲಗಳ ನಡುವೆ ಸ್ವಂತದ ಒಂದು ನಾಟಕ ಬರೆಯುವುದಕ್ಕೆ ವ್ಯವಧಾನ ಕೂಡಿಸಿಕೊಳ್ಳಲು ಆಗದಾಗಿದೆ ಎಂಬ ನೋವು ಈಗಲೂ ಇದೆ.

◆ ಎಲ್ಲರ ಬದುಕೂ ತೆರೆದ ಪುಸ್ತಕವೇ. ತೆರೆದೇ ಇರುತ್ತದಾದ್ದರಿಂದಲೇ ಇನ್ಯಾರೂ ಅದನ್ನು ಮುತುವರ್ಜಿಯಿಂದ ಗಮನಿಸಿ ಪಾಠ ಕಲಿಯುವುದಿಲ್ಲವೇನೋ. ನಮ್ಮ ಇಂದಿನ ಕಾಲದಲ್ಲಿ ಮನುಷ್ಯರ ಮಧ್ಯೆ ಜಾತಿ, ಧರ್ಮಗಳಂತಹ ಅಗಣಿತ ತಾರತಮ್ಯಗಳು ಬೆಳೆಯುತ್ತಿವೆ. ಇದೆಲ್ಲ ಹುಸಿ ಎಂಬ ಪುರಾವೆಗಳು ನಮ್ಮೊಳಗೇ ಇರ್ತಾವಲ್ಲವೇ? ಯಾರೋ ಅನಾಮಿಕ, ಯಾರೋ ಮೊಸರಿನಾಕೆ, ಯಾರೋ ಚಪ್ಪಲಿಯವ, ನಮ್ಮ ಧಾರವಾಡದಲ್ಲಿ ಚುರಮುರಿ ಮಾರುವವ... ನಿಮ್ಮನ್ನು ಗಾಢವಾಗಿ ಕಲಕಿದ್ದು ಇದೆಯೇ?

ಓಹೋ, ಅಂಥ ಬೇಕಾದಷ್ಟು ಪ್ರಸಂಗಗಳಿವೆ! ಈಗ ಒಂದೆರಡು ಹೇಳುತ್ತೇನೆ, ಅಷ್ಟೆ. ಜುಬಿಲಿ ಸರ್ಕಲ್‌ನಲ್ಲಿ, ಹೆಣ್ಣುಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜಿನ ಆವರಣ ಗೋಡೆಗೆ ಹತ್ತಿಕೊಂಡು ಇರುವ ಮೂಲೆಯಲ್ಲಿ ಒಬ್ಬ ಚಪ್ಪಲಿ ಹೊಲಿಯುವವನಿದ್ದ. ರಾಮಪ್ಪ ಅವನ ಹೆಸರು. ಯಾವಾಗಲೂ ತನ್ನ ತ್ಯಾಪಿ, ದಬ್ಬಣ, ದಾರ ಹಿಡಿದುಕೊಂಡು, ಒಂದು ದೊಡ್ಡ ಕಲ್ಲಿನ ಮೇಲೆ, ಮೀಟುತ್ತ, ಜಜ್ಜುತ್ತ